ಆಟ ಮತ್ತು ಕಲಿಕೆ । ತಡೆಗಳನ್ನು ನಿವಾರಿಸುವುದು

ಸುನಿತಾ ಸಿಂಗ್

ಮುಖ್ಯವಾಗಿ ಎಳೆಯ ಮಕ್ಕಳಿಗೆ, ಆಟದಿಂದ ದೊರೆಯುವ ಹಲವು ಲಾಭಗಳನ್ನು ದಶಕಗಳ ಹಿಂದೆಯೇ ಗುರುತಿಸಲಾಗಿದೆ. (ಬಾರ್ನೆಟ್, 1990). ಅನೇಕ ವರ್ಷಗಳಿಂದ ರೂಪಿಸಲಾದ ನೀತಿಗಳು ಮತ್ತು ನೀಡಲಾದ ಪಠ್ಯಕ್ರಮ ಶಿಫಾರಸ್ಸುಗಳು ಕಲಿಕಾರ್ಥಿ ಆಧಾರಿತ ತರಗತಿ ಕೋಣೆಯ ಚಟುವಟಿಕೆಗಳನ್ನು ನಡೆಸಲು ಗಮನ ನೀಡಿವೆ. ರಾಷ್ಟ್ರೀಯ ಆರಂಭಿಕ ಬಾಲ್ಯಾವಸ್ಥೆಯ ಪಠ್ಯಕ್ರಮ ಚೌಕಟ್ಟು National Early Childhood Curriculum Framework (2013), ಎಳೆಯ ಮಕ್ಕಳನ್ನು ಆಟ-ಆಧಾರಿತ ಕಲಿಕೆಯಲ್ಲಿ ತೊಡಗಿಸಿಕೊಳ್ಳಲು ಗಮನ ನೀಡುತ್ತದೆ. ತರಗತಿಯಲ್ಲಿ ಚಿಕ್ಕ ಮಕ್ಕಳ ಪಾಲಿಗೆ ಆಟವು ವಿಶೇಷ ಪ್ರಾಮುಖ್ಯತೆಯ ಸ್ಥಾನವನ್ನು ಪಡೆದಿದೆ. ನಿಜ ಹೇಳುವುದಾದರೆ, ಸೃಜನಶೀಲತೆ ಮತ್ತು ವಿಮರ್ಶಾತ್ಮಕ ಚಿಂತನೆಯ (ರಾಷ್ಟ್ರೀಯ ಶಿಕ್ಷಣ ನೀತಿ, 2020) ಉತ್ತೇಜನದ ಜೊತೆಗೆ ಮಕ್ಕಳ ಸಮಗ್ರ ಅಭಿವೃದ್ಧಿಗೆ ನೀಡಬೇಕಾದ ಗಮನವು, ಶಿಕ್ಷಣ ತಜ್ಞರು ತರಗತಿ ಕೋಣೆಗಳಲ್ಲಿ ಆಟ ಆಧಾರಿತ ತತ್ವಗಳ ಕಾರ್ಯ-ಯೋಜನೆಗಳನ್ನು ಜಾರಿಗೊಳಿಸುವ ಕುರಿತು ಆಳವಾದ ಒಳನೋಟವನ್ನು ಅಭಿವೃದ್ಧಿಪಡಿಸಿಕೊಳ್ಳುವಂತೆ ಮಾಡಿದೆ. ಚಿಕ್ಕ ಮಕ್ಕಳಿಗಾಗಿ ಆಟ ಆಧಾರಿತ ಕಲಿಕಾ ಕಾರ್ಯಯೋಜನೆಗಳನ್ನು ಅಳವಡಿಸಲು, ಸೂಕ್ತವಾಗಿ ಯೋಜಿಸಲಾದ ಪಠ್ಯಕ್ರಮ ಮತ್ತು ಇದನ್ನು ಜಾರಿಗೊಳಿಸುವುದಕ್ಕಾಗಿ ಸೂಕ್ತ ಸಿದ್ಧತೆ ನಡೆಸಿರುವ ಶಿಕ್ಷಕರ ಅಗತ್ಯವಿದೆ. ಚಿಕ್ಕ ಮಕ್ಕಳಿಗೆ ಕಲಿಸಬೇಕಾದರೆ ಮಕ್ಕಳು ಹೇಗೆ ಕಲಿಯುತ್ತಾರೆ ಎಂಬುದನ್ನು ಸಹ ತಿಳಿದಿರಬೇಕು (ಯುನಿಸೆಫ್, 2018). ಈ ಲೇಖನವು, ಆಟವು ಕಲಿಕೆಯೊಂದಿಗೆ ಹೊಂದಿರುವ ಸಂಬಂಧದ ಮೇಲೆ ಬೆಳಕು ಹರಿಸಲಿದೆ. ಅಲ್ಲದೆ ಅಭಿವೃದ್ಧಿಗೆ ಸಂಬಂಧಿಸಿದ ವಿವಿಧ ಕ್ಷೇತ್ರಗಳಲ್ಲಿ ಹಾಗೂ ಕಲಿಕೆಯ ಕ್ಷೇತ್ರಗಳಲ್ಲಿ ಎಳೆಯ ಮಕ್ಕಳೊಂದಿಗೆ ಆಟವನ್ನು ಬಳಸಲು ಇರುವ ಕೆಲವೊಂದು ನಿರ್ದಿಷ್ಟ ವಿಧಾನಗಳನ್ನು ಇಲ್ಲಿ ಚರ್ಚಿಸಲಾಗುವುದು.

ಆಟದ ಸನ್ನಿವೇಶ

ಬಹುಪಾಲಿಗೆ, ಭಾರತದಲ್ಲಿ ಬೋಧನೆ ಮತ್ತು ಕಲಿಕೆಯ ಚಿತ್ರಣವು, ನಾವು ಹೇಗೆ ಆಟ-ಆಧಾರಿತ ಕಲಿಕೆಯನ್ನು ಕಲ್ಪಿಸುತ್ತೇವೆಯೋ ಅದಕ್ಕೆ ವೈದೃಶ್ಯವಾಗಿದೆ. ಈ ವಿಭಿನ್ನ ಅಭ್ಯಾಸಗಳಿಗೆ ಬೇರೆ ಬೇರೆ ಕಾರಣಗಳಿರಬಹುದು. ಅಲ್ಲದೆ ಇವು ಕೆಲವೊಮ್ಮೆ ಪಠ್ಯಕ್ರಮದ ಅಭ್ಯಾಸಗಳ ಕಲ್ಪನೆ ಮತ್ತು ದೇಶದ ಶಿಕ್ಷಣದ ಸಾಮಾಜಿಕ-ಆರ್ಥಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯ ಕಾರಣದಿಂದ ಹೊರ-ಹೊಮ್ಮಿರಬಹುದು. ಮೊದಲಿಗೆ, ವಸಾಹತುಶಾಹಿ ಕಾಲದ ಪ್ರಮುಖ ಕೊಡುಗೆಯಾದ ಪಠ್ಯಕ್ರಮ ಆಧಾರಿತ ಬೋಧನಾ ಕ್ರಮವು (ಕುಮಾರ್, 1988) ತರಗತಿಯೊಳಗಿನ ಕಾರ್ಯಗಳ ಮೇಲೆ ಪೂರ್ವ ಪ್ರಾಥಮಿಕ ಹಂತದಲ್ಲಿಯೂ ಪರಿಣಾಮ ಬೀರುತ್ತಿದೆ. ಎರಡನೆಯದಾಗಿ, ಶಾಲಾ ಪೂರ್ವವನ್ನು ಮಟ್ಟದಲ್ಲಿಯೂ, ಗುಣಮಟ್ಟ ಕುರಿತ ಗ್ರಹಿಕೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಬೋಧನೆಯ ಔಪಚಾರಿಕ ವಿಧಾನಗಳ ಜೊತೆಗೆ ಗುರುತಿಸಲಾಗಿದೆ (ಸಿಂಗ್, 2019). ಮೂರನೆಯದಾಗಿ, ಆಟ-ಆಧಾರಿತ ಚಟುವಟಿಕೆಗಳನ್ನು, ಪ್ರಾಥಮಿಕ ಶಾಲೆಗಳ ಪ್ರವೇಶಕ್ಕೆ ಪೂರ್ವತಯಾರಿಯಲ್ಲ ಎಂಬುದಾಗಿ ಪರಿಗಣಿಸಲಾಗಿದೆ (ಸಿಂಗ್, 2019). ಇವು ಶಾಲಾ ಪೂರ್ವ ಹಂತದ ಪ್ರಮುಖ ಉದ್ದೇಶವಾಗಿದ್ದರೂ ನಾಲ್ಕನೆಯದಾಗಿ, ಶೈಕ್ಷಣಿಕ ವಿಷಯಗಳನ್ನು ಪೂರ್ಣಗೊಳಿಸಲು ಇರುವ ಸಮಯದ ಮಿತಿಯು ಆಟ-ಆಧಾರಿತ ಕಾರ್ಯವಿಧಾನಗಳಿಗೆ ಹೆಚ್ಚಿನ ಅವಕಾಶವನ್ನು ನೀಡುವುದಿಲ್ಲ. ಈ ವಿಶಿಷ್ಟ ಹಾಗೂ ಸಹ ಸಂಬಂಧ ಹೊಂದಿರುವ ಅಂಶಗಳು ಆಟ ಮತ್ತು ಕಲಿಕೆಯ ನಡುವೆ ಕಂದಕವನ್ನಷ್ಟೇ ಸೃಷ್ಟಿಸಿವೆ. ಚಿಕ್ಕ ಮಕ್ಕಳಿಗಾಗಿ ಆಟವನ್ನು ಗುರುತಿಸಲಾಗಿಲ್ಲ ಮತ್ತು ಕಾರ್ಯವಿಧಾನವಾಗಿ ಗುರುತಿಸಲಾಗಿಲ್ಲ ಎಂದು ಹೇಳಲಾಗದು. ಆದರೆ ಆಟ ಮತ್ತು ಕಲಿಕೆಯ ನಡುವಿನ ಸಂಬಂಧವನ್ನು ಸರಿಯಾಗಿ ಗ್ರಹಿಸಲಾಗಿಲ್ಲ.

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (ಎನ್‌ಸಿಇಆರ್‌ಟಿ, 2005; ಆರಂಭಿಕ ಬಾಲ್ಯಾವಸ್ಥೆ ಆರೈಕೆ ಮತ್ತು ಶಿಕ್ಷಣ ಚೌಕಟ್ಟು 2013), ರಚನಾತ್ಮಕತೆ ಮತ್ತು ಆಟ-ಆಧಾರಿತ ಬೋಧನಾ ಕ್ರಮಕ್ಕೆ (play-based pedagogies) ದಿಕ್ಸೂಚಿಯನ್ನು ರೂಪಿಸಿದರೆ, ಬೋಧನಾ ವಿಧಾನ ಕ್ರಮದಲ್ಲಿನ ನಂಬಿಕೆಯಲ್ಲಿ ಅಗತ್ಯ ಬದಲಾವಣೆ ತರಬೇಕಾದರೆ ತರಬೇತಿಯನ್ನು ಒದಗಿಸುವುದಲ್ಲದ್ದೆ ಮೂಲಭೂತ ಸೌಕರ್ಯ ಮತ್ತು ಸಾಮಗ್ರಿಗಳಲ್ಲಿ ಶಿಕ್ಷಕರ ಕರ್ತೃತ್ವ ಮತ್ತು ಸ್ವಾಯತ್ತತೆಯ ಪ್ರತಿಪಾದನೆಯ ಅಗತ್ಯವಿದೆ (ಕೌಲ್ ಮತ್ತು ಶರ್ಮ, 2017). ಬೋಧನೆಯ ಕುರಿತ ಶಿಕ್ಷಕರ ನಂಬಿಕೆಗಳು ವೈಯಕ್ತಿಕ ಮತ್ತು ವೃತ್ತಿಪರ ಮಟ್ಟದಲ್ಲಿ ತಮ್ಮದೇ ಅನುಭವದಿಂದ ಮೊಳಕೆಯೊಡೆಯುತ್ತವೆ. ಇವು, ಶಿಕ್ಷಕರ ಕರ್ತೃತ್ವ ಮತ್ತು ಸ್ವಾಯತ್ತತೆಯನ್ನು ಸಕ್ರಿಯಗೊಳಿಸುವುದು ಮತ್ತು ಆಟ-ಆಧಾರಿತ ಕಾರ್ಯ-ವಿಧಾನಗಳನ್ನು ಜಾರಿಗೊಳಿಸುವುದಕ್ಕಾಗಿ ನೀತಿ ನಿರೂಪಣೆಯಲ್ಲಿ ಅವರು ಭಾಗವಹಿಸಬೇಕಾದ ಅಗತ್ಯತೆಯತ್ತ ಬೊಟ್ಟು ಮಾಡುತ್ತವೆ.

ಆಟ, ಕಲಿಕೆ ಮತ್ತು ಅಭಿವೃದ್ಧಿ

ಆಟವು ಬಾಲ್ಯದ ಆರಂಭಿಕ ವರ್ಷಗಳಲ್ಲಿ ಕಲಿಕೆ ಮತ್ತು ಅಭಿವೃದ್ಧಿಗಾಗಿ ಅತ್ಯಗತ್ಯ. ಇದು ಮಗುವಿನ ಸಾಮಾಜಿಕ, ಭಾವನಾತ್ಮಕ, ದೈಹಿಕ ಮತ್ತು ಸಂಜಾನಾತ್ಮಕ ಬೆಳವಣಿಗೆಯಲ್ಲಿ ಪರಿಣಾಮ ಬೀರುತ್ತದೆ. ಆರಂಭಿಕ ಕಲಿಕೆ ಮತ್ತು ಅಭಿವೃದ್ಧಿಯ ಕುರಿತು ಮಾಡಲಾದ ಸಂಶೋಧನೆಯು, ಆಟದಲ್ಲಿ ಮಕ್ಕಳನ್ನು ಬೆಂಬಲಿಸಿದರೆ ಇದು ಅವರ ಕಲಿಕೆ ಮತ್ತು ಬೆಳವಣಿಗೆಗೆ ಕೊಡುಗೆ ನೀಡುತ್ತದೆ ಹಾಗೂ ಯಾವುದೇ ಋಣಾತ್ಮಕ ಪರಿಣಾಮವನ್ನು ಹೊಂದಿಲ್ಲ ಎಂಬುದಾಗಿ ಸೂಚಿಸಿದೆ (ಬರ್ಗನ್, 2002). ಹೀಗಾಗಿ ಆಟದ ನಿರ್ದಿಷ್ಟ ಲಾಭಗಳು ಮತ್ತು ಇದನ್ನು ತರಗತಿ ಕೋಣೆಗಳಲ್ಲಿ ಹೇಗೆ ಅಳವಡಿಸಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಅಗತ್ಯ. ಇಟಲಿಯ ಶಿಕ್ಷಣ ಶಾಸ್ತ್ರಜ್ಞರಾಗಿದ್ದ ಮರಿಯಾ ಮಾಂಟೆಸರಿ ಅವರು ಆಟವು 'ಮಗುವಿನ ಕೆಲಸ' ಎಂದು ನಂಬಿದ್ದರು. ತಮ್ಮ ದಿನನಿತ್ಯದ ಚಟುವಟಿಕೆಗಳಲ್ಲಿ ತೊಡಗಿಕೊಂಡಾಗ ಮಕ್ಕಳು

ಕಲಿಯುತ್ತಿರುತ್ತಾರೆ ಎಂದು ಅವರು ಹೇಳಿದ್ದರು. ಮಕ್ಕಳು ಸ್ವಾಭಾವಿಕವಾಗಿ ಆಡುವಾಗ, ಜ್ಞಾನ ರೂಪಿಸಲು ಅಗತ್ಯವೆನಿಸುವ ಸಮಸ್ಯೆ ಪರಿಹಾರ ಚಟುವಟಿಕೆಗಳನ್ನು ಪರಿಶೋಧಿಸುವ ಪ್ರಯೋಗ ಮಾಡುವ, ಕುಶಲತೆಯಿಂದ ನಿರ್ವಹಿಸುವ ಮತ್ತು ಅವುಗಳಲ್ಲಿ ತೊಡಗಿಸಿಕೊಳ್ಳುವ ಅವಕಾಶ ದೊರೆಯುತ್ತದೆ. (ಆರಂಭಿಕ ಬಾಲ್ಯ ಶಿಕ್ಷಣ ಪಠ್ಯಕ್ರಮ ಚೌಕಟ್ಟು, 2013). ಭಾರತದ ಸಾಂಸ್ಕೃತಿಕ ಹಿನ್ನೆಲೆಯಲ್ಲಿ, ಆಟದಲ್ಲಿ ವೈವಿಧ್ಯತೆ ಇರುವ ಕಾರಣ, ಆಟಗಳ ಈ ವಿವಿಧತೆಗಳನ್ನು ಪಠ್ಯಕ್ರಮದೊಳಗೆ ತಂದರೆ ಖಂಡಿತವಾಗಿಯೂ ತರಗತಿ ಕೋಣೆಯ ವಾತಾವರಣದಲ್ಲಿ ಇನ್ನಷ್ಟು ಸಮೃದ್ಧಿ ಕಂಡುಬರಲಿದೆ.

ಆಟ ಮತ್ತು ಕಲಿಕೆಯ ನಡುವಿನ ಸಂಬಂಧವನ್ನು ಅರ್ಥ ಮಾಡಿಕೊಳ್ಳಬೇಕಾದರೆ ಮೊದಲಿಗೆ ವಿವಿಧ ಪ್ರಕಾರದ ಆಟಗಳನ್ನು ಪರಿಶೀಲಿಸಬೇಕಾಗುತ್ತದೆ. ಏಕಾಂತದ ಆಟ, ಸಮಾನಾಂತರ ಆಟ, ಗುಂಪು ಆಟ, ಕ್ರಿಯಾತ್ಮಕ ಆಟ, ರಚನಾತ್ಮಕ ಆಟ, ಪರಿಶೋಧನೆ, ನಾಟಕೀಯ ಆಟ, ನಿಯಮಗಳೊಂದಿಗೆ ಆಟ ಹೀಗೆ ಕಾರ್ಯ-ಕ್ಷೇತ್ರದಲ್ಲಿ ಅನೇಕ ರೀತಿಯ ಆಟಗಳನ್ನು ಗುರುತಿಸಲಾಗಿದೆ (ರುಬಿನ್, 2001). ಆಟ-ಆಧಾರಿತ ಕಲಿಕೆಯನ್ನು ಅರ್ಥ ಮಾಡಿಕೊಳ್ಳುವ ಉದ್ದೇಶದಿಂದ ಎರಡು ರೀತಿಯ ಆಟಗಳನ್ನು ಗುರುತಿಸಬಹುದು. ಅವುಗಳೆಂದರೆ ಮುಕ್ತ ಆಟ ಮತ್ತು ನಿರ್ದೇಶಿತ ಆಟ. ಮುಕ್ತ ಆಟವು ಮಗು ನಿರ್ದೇಶಿತ ಆಟವಾಗಿದ್ದು ಇದು ಮಗುವು ಆನಂದಿಸುವ ಆಟವಾಗಿದೆ. ಇದನ್ನು ಒಬ್ಬನೇ/ಳೇ ಅಥವಾ ಇತರರೊಂದಿಗೆ ಸೇರಿಕೊಂಡು ಆಡಬಹುದು. ಇನ್ನೊಂದೆಡೆ, ನಿರ್ದೇಶಿತ ಆಟವೆಂದರೆ, ವಯಸ್ಕರ ಮಧ್ಯಸ್ಥಿಕೆಯೊಂದಿಗೆ ಇದು ಮುಕ್ತ ಆಟದ, ಮಗು-ಕೇಂದ್ರಿತ ಉಲ್ಲಾಸದಾಯಕ ಅಂಶಗಳನ್ನು ಮುಖ್ಯವಾಗಿ ಒಳಗೊಂಡಿರುವಂತಹ ಚಟುವಟಿಕೆಗಳನ್ನು ಒಳಗೊಂಡಿದೆ. ಹೀಗಾಗಿ, ಈ ಬೆಂಬಲದ ಮೂಲಕ ಆತನ ಅಥವಾ ಆಕೆಯ ಕಲಿಕೆಯನ್ನು ವಿಸ್ತರಿಸಲು ಇದು ಸಕ್ರಿಯಗೊಳಿಸುತ್ತದೆ (ವೀಸ್‌ಬರ್ಗ್, ಮತ್ತಿತರು, 2016). ಹೀಗೆ, ಇದು ಎಳೆಯ ಮಕ್ಕಳ ಕರ್ತೃತ್ವ ಮತ್ತು ಒಬ್ಬ ವಯಸ್ಕನ ನಿರ್ದೇಶನವನ್ನು ಒಳಗೊಂಡಿದೆ. ಈ ಮೂಲಕ ಆಟವು, ಮಕ್ಕಳು ತಮ್ಮ ಆಸಕ್ತಿಗಳನ್ನು ಪರಿಶೋಧಿಸಲು ಸನ್ನಿವೇಶವನ್ನು ಒದಗಿಸುವುದಲ್ಲದೆ ಶಿಕ್ಷಕರಿಗೆ ತಮ್ಮ ಕಲಿಕೆಯನ್ನು ನಿರ್ದಿಷ್ಟ ಗುರಿಗಳ ಮೂಲಕ ನಿರ್ದೇಶಿಸಲು ಅನುವು ಮಾಡಿಕೊಡುತ್ತದೆ.

ಪೆಲೆಗ್ರಿನಿ (2006) ಅವರು ಒಂದು ಸಂಶೋಧನಾ ಅಧ್ಯಯನವನ್ನು ನಡೆಸಿದ್ದು, ಬಿಡುವಿನ ವೇಳೆಯಲ್ಲಿ ಮುಕ್ತ ಆಟದಲ್ಲಿ ತೊಡಗಿಕೊಂಡಿದ್ದ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳು ತಮ್ಮ ತರಗತಿ ಕೋಣೆಗೆ ಮರಳಿದಾಗ ತಮ್ಮ ಕಾರ್ಯ-ಚಟುವಟಿಕೆಗಳ ಕಡೆಗೆ ಹೆಚ್ಚು ಗಮನ ನೀಡುತ್ತಿದ್ದರು ಎಂಬುದನ್ನು ಈ ಅಧ್ಯಯನವು ಹೇಳಿದೆ. ಈ ಮಕ್ಕಳು, ಮುಖ್ಯವಾಗಿ ಹುಡುಗರು, ವಿರಾಮದ ವೇಳೆ ಆಟವಾಡದೆ ಇದ್ದ ಮಕ್ಕಳಿಗೆ ಹೋಲಿಸಿದರೆ, ಓದುವಿಕೆ ಮತ್ತು ಗಣಿತದಲ್ಲಿ ಶೈಕ್ಷಣಿಕವಾಗಿ ಉತ್ತಮ ಸಾಧನೆ ಮಾಡಿದ್ದರು ಎಂದು ಈ ಅಧ್ಯಯನದ ಫಲಿತಾಂಶಗಳು ತೋರಿಸಿವೆ. ಹೀಗಾಗಿ, ಆಟ-ಆಧಾರಿತ ಕಾರ್ಯವಿಧಾನದ ಮೇಲೆ ಯೋಜನೆ ರೂಪಿಸುವುದು ತರಗತಿ ಕೋಣೆಯಲ್ಲಿ ಶಿಕ್ಷಕರ ಪಾಲಿಗೆ ಪ್ರಮುಖವಾದ ವಿಚಾರವಾಗಿದೆ. ಏಕೆಂದರೆ, ಬೆಳವಣಿಗೆ ಮತ್ತು ಸನ್ನಿವೇಶಕ್ಕೆ ಸೂಕ್ತವೆನಿಸುವ ವಿಧಾನಗಳಲ್ಲಿ ಶೈಕ್ಷಣಿಕ ಪಠ್ಯಕ್ರಮವನ್ನು ಕಲಿಸಲು ಇವುಗಳನ್ನು ಬಳಸಬಹುದಾಗಿದೆ. ನಿರ್ದೇಶಿತ ಆಟವು ತರಗತಿ ಕೋಣೆಗೆ ಹೆಚ್ಚು ಸೂಕ್ತ ಎಂಬುದಾಗಿ ಪರಿಗಣಿಸಲಾಗಿದ್ದರೂ ಎರಡೂ ವಿಧಾನದ ಆಟಗಳು ಶಿಕ್ಷಕರಿಗೆ ಪ್ರಯೋಜನವನ್ನುಂಟು ಮಾಡುತ್ತವೆ. ಆಟದ ವಿವಿಧ ಆಯಾಮಗಳು ಮತ್ತು ಇದನ್ನು ತರಗತಿಯೊಳಗಡೆ ಮತ್ತು ತರಗತಿಯ ಹೊರಗಡೆ ಯಾವ ರೀತಿ ಬಳಸಿಕೊಳ್ಳಬಹುದು ಎಂಬುದನ್ನು ಅರಿತುಕೊಳ್ಳುವುದು ಅತ್ಯಗತ್ಯ. ಆಟದ ಪ್ರಯೋಜನಗಳು ಬೆಳವಣಿಗೆ ಮತ್ತು ಕಲಿಕೆಯ ಕ್ಷೇತ್ರಗಳ ಮೇಲೆ ಪರಿಣಾಮವನ್ನು ಹೊಂದಿವೆ.

ಸಾಮಾಜಿಕ, ಭಾವನಾತ್ಮಕ ಮತ್ತು ದೈಹಿಕ ಬೆಳವಣಿಗೆ

ಆಟದ ಬಹುವಿಧದ ಗುಣಲಕ್ಷಣವು ಮಕ್ಕಳು ತಮ್ಮ ಸಮಾನ ವಯಸ್ಸಿನವರೊಂದಿಗೆ ಸಂವಾದ ನಡೆಸಲು ಮತ್ತು ಅವರೊಂದಿಗೆ ತೊಡಗಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ. ಈ ತೊಡಗಿಸಿ-ಕೊಳ್ಳುವಿಕೆಯು, ವಿಶೇಷವಾಗಿ ಚಿಕ್ಕ ಮಕ್ಕಳ ಪಾಲಿಗೆ, ತಮ್ಮ ಸಾಮಾಜಿಕ ಮತ್ತು ಭಾವನಾತ್ಮಕ ಕೌಶಲ್ಯಗಳನ್ನು ಅಭಿವೃದ್ಧಿ-ಪಡಿಸಿಕೊಳ್ಳಲು ಅತ್ಯಗತ್ಯವಾದುದು. ನಮ್ಮ ಪ್ರಸ್ತುತ ಸನ್ನಿವೇಶದಲ್ಲಿ, ದೈಹಿಕ ಆಟಗಳಿಗೆ ಅವಕಾಶ ಕಡಿಮೆಯಾಗುತ್ತಿರುವಾಗ ಹಾಗೂ ತಾಂತ್ರಿಕತೆಯ ಅತಿಯಾದ ಬಳಕೆಯ ಕಾರಣ, ತಮ್ಮ ದೈಹಿಕ ಆರೋಗ್ಯಕ್ಕಾಗಿ ಮತ್ತು ಸಮಾನ ವಯಸ್ಸಿನವರ ಜೊತೆಗೆ ಸಾಮಾಜಿಕ ತೊಡಗುವಿಕೆಯು ಸಾಧ್ಯವಾಗಲು ಮಕ್ಕಳು ಹೊರಗೆ ಹೋಗಿ ದೈಹಿಕ ಆಟಗಳಲ್ಲಿ ಪಾಲ್ಗೊಳ್ಳುವ ಅಗತ್ಯತೆಯ ಕುರಿತ ಜಾಗೃತಿಯು ಇನ್ನಷ್ಟು ಬಲಗೊಂಡಿದೆ. ಮಕ್ಕಳು ದೈಹಿಕ ಆಟಗಳಲ್ಲಿ ತೊಡಗಿಸಿಕೊಂಡಾಗ ಇದು ಅವರಿಗೆ ದೈಹಿಕ ವಿಮೋಚನೆ ಒದಗಿಸುತ್ತದೆ ಮತ್ತು ಸ್ನೇಹವನ್ನು ಉತ್ತೇಜಿಸಿ ಸಮಾಜಮುಖಿ ವರ್ತನೆ ಮತ್ತು ಮನೋಭಾವವನ್ನು ಪ್ರೋತ್ಸಾಹಿಸುವ ಸಾಧ್ಯತೆಯಿದೆ. (ಸ್ಕಾಟ್ ಮತ್ತು ಪ್ಯಾಂಕ್‌ಸೆಪ್, 2003, ಪು. 549) ಒಟ್ಟಿಗೆ ಸೇರಿ ಆಡುವ ಸಾಮರ್ಥ್ಯವಿರುವ ಮಕ್ಕಳು ಇನ್ನೊಬ್ಬರ ಜೊತೆ ಸೇರಿ ಕೆಲಸ ಮಾಡುವ ಪ್ರಕ್ರಿಯೆಯನ್ನೂ ಮೈಗೂಡಿಸಿ-ಕೊಳ್ಳುತ್ತಾರೆ. ಆಟವು ಮಕ್ಕಳಿಗೆ ಸಂಬಂಧಗಳು ಮತ್ತು ಸ್ನೇಹವನ್ನು ಬೆಳೆಸಲು, ಕೆಲಸ ಮಾಡಲು, ಕಲಿಯಲು, ಸಹಕರಿಸಲು ಮತ್ತು ಸಂಘರ್ಷಗಳನ್ನು ಬಗೆಹರಿಸಲು ಕಲಿಸುತ್ತದೆ (ಬ್ಲೇಸಿ ಮತ್ತು ಹರ್ವಿಟ್ಜ್ 2012, ಪೆಲೆಗ್ರಿನಿ ಮತ್ತು ಸ್ಮಿತ್ 1998). ಮಕ್ಕಳು ಇತರರೊಂದಿಗೆ ಆಟವಾಡುವಾಗ, ಆ ಪ್ರಕ್ರಿಯೆಯು, ಅವರು ಯಾವ ಸನ್ನಿವೇಶದಲ್ಲಿದ್ದಾರೆ ಎಂಬುದನ್ನು ಅವರು ಗುರುತಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ ಹಾಗೂ ಸ್ವಯಂ ಪ್ರಜ್ಞೆಯನ್ನು ರೂಪಿಸಿಕೊಳ್ಳಲು ಸಹಾಯ ಮಾಡುತ್ತದೆ. ಏಕೆಂದರೆ ಆಟದ ಪ್ರಕ್ರಿಯೆಯು ವಿವಿಧ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಮತ್ತು ತಮ್ಮ ಸಮಾನ ವಯಸ್ಸಿನವರೊಡನೆ ಸಂಧಾನ ನಡೆಸುವುದನ್ನು ಒಳಗೊಂಡಿದೆ. ಆಗಿಂದಾಗ್ಗೆ ಮಕ್ಕಳ ಆಟವು ಸರದಿಗಾಗಿ ಕಾಯುವುದು, ಕಾಯುವುದು, ಮುನ್ನಡೆಸುವುದು ಮುಂತಾದ ನಿಯಮಗಳನ್ನು ಹೊಂದಿರುತ್ತದೆ. ಇದು ಅವರಿಗೆ ಸ್ವಾವಲಂಬಿ ಮತ್ತು ಸ್ವಯಂಪ್ರೇರಿತ ವಿದ್ಯಾರ್ಥಿಗಳಾಗಲು ಶಕ್ತಿ ನೀಡುತ್ತದೆ.

ಘಫೂರಿ ಮತ್ತು ವಿಯೆನ್ ನಡೆಸಿದ ಸಂಶೋಧನೆಯು (2009), ಮಕ್ಕಳು ನಿರ್ದೇಶಿಸುವ ಆಟವು ತಮ್ಮ ಸಮಾನ ವಯಸ್ಸಿನವ-ರೊಂದಿಗೆ ಸಾಮಾಜಿಕ-ಭಾವನಾತ್ಮಕ ಬಂಧವನ್ನು ರೂಪಿಸಲು ಅವರಿಗೆ ಅನುವು ಮಾಡಿಕೊಡುತ್ತದೆ ಹಾಗೂ ಇದು ಅವರ ಆಟಕ್ಕೆ ಪುಷ್ಟಿ ಕೊಡುತ್ತದೆ. ಮಕ್ಕಳು ನಿಯಮಗಳನ್ನು ಅರಿತುಕೊಳ್ಳಲು ಮತ್ತು ಪಾಲಿಸಲು, ಸಂಘರ್ಷಗಳ ಕುರಿತು ಸಂಧಾನ ನಡೆಸಲು ಮತ್ತು ಪರಿಹರಿಸಲು, ತಮ್ಮ ಸಮಾನವಯಸ್ಕರ ಯೋಗಕ್ಷೇಮದ ಕುರಿತು ಜಾಗೃತರಾಗಲು ಮತ್ತು ಬೆಂಬಲಿಸಲು ಈ ರೀತಿಯ ಆಟವು

ಅತ್ಯಗತ್ಯ. ಮಕ್ಕಳ ಆಟ ಮತ್ತು ಭಾವನಾತ್ಮಕ ಬೆಳವಣಿಗೆಯ ಜೊತೆಗಿನ ಇದರ ಸಂಬಂಧವನ್ನು ಚೆನ್ನಾಗಿ ದಾಖಲಿಸಲಾಗಿದೆ. ಎಲ್ಲ ರೀತಿಯ ಆಟಗಳು ಎಳೆಯ ಮಕ್ಕಳ ಕಲಿಕೆ ಮತ್ತು ಬೆಳವಣಿಗೆಗೆ ಅವಕಾಶ ಒದಗಿಸಿದರೆ, ಮಕ್ಕಳು ನಟನೆಯ ಆಟವನ್ನು ತಮ್ಮ ಭಾವನೆಗಳನ್ನು ಅರಿತುಕೊಳ್ಳಲು ಮತ್ತು ತಿಳಿಸಲು, ಅನುಭೂತಿಯನ್ನು ಬೆಳೆಸಿಕೊಳ್ಳಲು ಮತ್ತು ಸಂತುಲಿತ ಭಾವನಾತ್ಮಕ ಆರೋಗ್ಯಕ್ಕಾಗಿ ಬಳಸಿಕೊಳ್ಳುತ್ತಾರೆ (ಕ್ವೋನ್ ಮತ್ತು ಯಾಕಿ, 2000). ಶಿಕ್ಷಕರು ಮತ್ತು ಶಾಲೆಯು ದೈಹಿಕ ಆಟದ ನಿರಂತರ ಬಳಕೆಯನ್ನು ಬೆಂಬಲಿಸಿದರೆ ಇದು ತಮ್ಮ ಮನೆಗಳು ಮತ್ತು ಸಮುದಾಯಗಳಲ್ಲಿ ಎಳೆಯ ಮಕ್ಕಳು ಆಟದಲ್ಲಿ ತೊಡಗಿಸಿಕೊಳ್ಳಲು ಶಕ್ತಿಶಾಲಿ ಮಾದರಿಯೊಂದನ್ನು ಒದಗಿಸುತ್ತದೆ. ತಾಂತ್ರಿಕತೆಯು ಎಳೆಯ ಮಕ್ಕಳ ಆಟದ ಸಮಯವನ್ನು ಕಸಿದುಕೊಳ್ಳುತ್ತಿದ್ದು, ಈ ಮಾದರಿಯು ಆಟದ ಕ್ಷೇತ್ರಗಳಲ್ಲಿ ತಾಂತ್ರಿಕತೆಯ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುತ್ತದೆ.

ಭಾಷೆ ಮತ್ತು ಸಾಕ್ಷರತೆಯ ಬೆಳವಣಿಗೆ

ಭಾಷೆ ಮತ್ತು ಸಾಕ್ಷರತೆ ಮಕ್ಕಳಿಗೆ ಆಟದ ವೇಳೆ ಪರಸ್ಪರ ಸಂವಹನ ನಡೆಸಲು ಇರುವ ಪ್ರಮುಖ ವಿಧಾನಗಳಾಗಿವೆ. ಭಾಷೆಯ ಮೂಲಕ ನಡೆಸುವ ಸಂವಹನವು ಮಕ್ಕಳಿಗೆ ಸಂಬಂಧವನ್ನು ಬೆಳೆಸಲು, ನಟನಾತ್ಮಕ ಆಟದಲ್ಲಿ ಪಾಲ್ಗೊಳ್ಳಲು ಮತ್ತು ಆಟದ ವೇಳೆ ಉಂಟಾಗಬಹುದಾದ ಸಂಘರ್ಷಗಳನ್ನು ನಿಭಾಯಿಸಲು ಅನುಕೂಲಿಸುತ್ತದೆ. ಮಕ್ಕಳಿಗೆ, ತಮ್ಮ ಕಲ್ಪನೆಯ ತಾವು ಆಗಲು ಬಯಸುವ ಯಾವುದೇ ವ್ಯಕ್ತಿಯಾಗಲು ಅನುವು ಮಾಡಿಕೊಡುತ್ತದೆ ಎಂಬುದನ್ನು ಅರಿತುಕೊಳ್ಳಲು ಭಾಷೆಯು ಸಹಕಾರಿಯಾಗಿದೆ. ಆಟವು ಪ್ರಾತಿನಿಧಿಕ ಹಾಗೂ ಅಮೂರ್ತ ಚಿಂತನಾ ಪ್ರಕ್ರಿಯೆಯ ಅಭಿವೃದ್ಧಿಗೆ ಕೊಡುಗೆ ನೀಡುತ್ತದೆ ರಾಷ್ಟ್ರೀಯ ಬಾಲ್ಯಾವಸ್ಥೆ ಆರೈಕೆ ಮತ್ತು ಶಿಕ್ಷಣದ ರಾಷ್ಟ್ರೀಯ ಚೌಕಟ್ಟು, 2013).

> ನಮ್ಮ ದೇಶದ ಭಾಷೆ ಮತ್ತು ಸಾಕ್ಷರತೆಯ ಹಿನ್ನೆಲೆಯು ಭಾಷೆ, ಸಾಕ್ಷರತೆ ಮತ್ತು ಆಟಗಳ ನಡುವಿನ ಸಂಬಂಧಗಳನ್ನು ಚರ್ಚಿಸುತ್ತಲೇ ಎರಡು ಆಯಾಮಗಳನ್ನು ನಮಗೆ ನೀಡುತ್ತದೆ. ಮೊದಲನೆಯದು ದೇಶದ ಶ್ರೀಮಂತ ಭಾಷಾ ಸಂಪ್ರದಾಯ ಮತ್ತು ಮಕ್ಕಳು ತರಗತಿ ಕೋಣೆಗೆ ತರುವ ಭಾಷಾ ವೈವಿಧ್ಯತೆಗಳ ಅಂಗೀಕಾರ. ನಮ್ಮ ಆಡುಭಾಷೆಗಳು ನಮ್ಮ ಅಸ್ಮಿತೆಯೊಂದಿಗೆ ಬಲವಾಗಿ ಗುರುತಿಸಿಕೊಂಡಿವೆ ಎಂಬುದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು. ಹೀಗಾಗಿ, ಎಳೆಯ ಮಕ್ಕಳು ತರಗತಿಯ ಕೋಣೆಗೆ ತರುವ ಭಾಷೆಗಳನ್ನು ಅಂಗೀಕರಿ-ಸುವುದು ಮತ್ತು ಗೌರವಿಸುವುದು ಅತ್ಯಗತ್ಯ. ಎರಡನೆಯದಾಗಿ ನಮ್ಮ ಎಲ್ಲ ಭಾಷೆಗಳು ಒಗಟುಗಳು, ಕವಿತೆಗಳು, ಪದ್ಯಗಳು ಇತ್ಯಾದಿಗಳಿಂದ ತುಂಬಿ ಹೋಗಿವೆ. ಮಕ್ಕಳನ್ನು ಆಟದಲ್ಲಿ ತೊಡಗಿಸಿಕೊಳ್ಳುವುದಕ್ಕಾಗಿ ಇವುಗಳನ್ನು ತರಗತಿಯಲ್ಲಿ ಸಂಪನ್ಮೂಲಗಳಾಗಿ ಬಳಸಬಹುದು.

ಮಕ್ಕಳ ಆಟ ಮತ್ತು ಉದಯೋನ್ಮುಖ ಸಾಕ್ಷರತೆಯ ಕೌಶಲ್ಯಗಳ ಅಭಿವೃದ್ಧಿ – ಇವೆರಡೂ ವಿಷಯಗಳು ಪರಸ್ಪರ ಬಲವಾಗಿ ಸಂಬಂಧಿಸಿವೆ ಎಂಬುದಾಗಿ ಹೇಳಲಾಗಿದೆ (ಕ್ರಿಸ್ಟಿ ಮತ್ತು ಎಂಜ್, 1992). ಉದಯೋನ್ಮುಖ ಸಾಕ್ಷರತೆಯ ಕೌಶಲ್ಯವನ್ನು ಬಳಸಲು ಎಳೆಯ ಮಕ್ಕಳು ಮಾಡುವ ಆರಂಭಿಕ ಪ್ರಯತ್ನಗಳು ಅವರು ಬಳಸುವ ಪ್ರಾಸಬದ್ಧ ಆಟಗಳು, ಶಾಪಿಂಗ್‌ಗೆ ಪಟ್ಟಿ ಮಾಡುವುದು, ನಟನೆಯ ಓದು, ಇತ್ಯಾದಿ ವಿಚಾರಗಳಲ್ಲಿ ಕಾಣಸಿಗುತ್ತವೆ (ಬರ್ಜನ್ ಮತ್ತು ಮೌರ್, 2000). ತರಗತಿ ಕೋಣೆಯಲ್ಲಿ ಸಾಂಕೇತಿಕ ಆಟದಲ್ಲಿ ತೊಡಗಿಸಿಕೊಳ್ಳುವ ಸಾಮರ್ಥ್ಯ ಹೊಂದಿದ ಮಕ್ಕಳು ತಮ್ಮ ಮುಂದಿನ ತರಗತಿಗಳಲ್ಲಿ ಓದುವುದು ಮತ್ತು ಬರೆಯುವುದರಲ್ಲಿ ಉತ್ತಮ ಸಾಮರ್ಥ್ಯ ತೋರಿಸಿದ್ದಾರೆ ಎಂದು ಸಂಶೋಧಕರು ಕಂಡುಕೊಂಡಿದ್ದಾರೆ. ಟೌಬ್ ಮತ್ತಿತರರು (2018) ಎರಡು ಅಧ್ಯಯನಗಳನ್ನು ನಡೆಸಿದರು. ಇದರಲ್ಲಿ, ಕಡಿಮೆ ಆದಾಯದ ಶಾಲಾಪೂರ್ವದ 249 ಶಾಲಾಪೂರ್ವ ಮಕ್ಕಳಲ್ಲಿ ಪದ ಭಂಡಾರದ ಹಸ್ತಕ್ಷೇಪಕ್ಕಾಗಿ ಅಭಿವೃದ್ಧಿಪಡಿಸಿದ ಕಾರ್ಯಕ್ರಮವೊಂದರಲ್ಲಿ ಆಟದ ಪಾತ್ರವನ್ನು ಇವರು ಪರಿಶೀಲಿಸಿದರು. ಮಕ್ಕಳಿಗೆ ಹೊಸ ಪದಗಳನ್ನು ಪರಿಚಯಿಸಲು ಆಟಿಕೆಗಳೊಂದಿಗೆ ಪುಸ್ತಕ ಓದುವ ಕಾರ್ಯತಂತ್ರವನ್ನು ಬಳಸಲಾಯಿತು. ಮೊದಲ ಅಧ್ಯಯನದಲ್ಲಿ, ಮಕ್ಕಳನ್ನು ಯಾದೃಚ್ಛಿಕವಾಗಿ ಮುಕ್ತ ಆಟ, ಮಾರ್ಗದರ್ಶಿತ ಆಟ ಮತ್ತು ನಿರ್ದೇಶಿತ ಆಟಗಳಿಗೆ ವಿಂಗಡಿಸಲಾಯಿತು. ವಯಸ್ಕರೊಬ್ಬರ ವಿವಿಧ ಮಟ್ಟದ ಬೆಂಬಲದೊಂದಿಗೆ ಎಲ್ಲ ಬಗೆಗಿನ ಮಕ್ಕಳು ಪದಗಳ ಜ್ಞಾನದಲ್ಲಿ ಸುಧಾರಣೆಯನ್ನು ತೋರಿಸಿದರು. ವಯಸ್ಕರ ಬೆಂಬಲ ಹೊಂದಿದ್ದ ಎರಡು ತಂಡಗಳಲ್ಲಿದ್ದ ಮಕ್ಕಳು ಹೆಚ್ಚಿನ ಲಾಭ ಗಳಿಸಿದ್ದರು. ಎರಡನೇ ಅಧ್ಯಯನದಲ್ಲಿ, ಸಂಶೋಧಕರ ಸ್ಥಾನದಲ್ಲಿ ತರಗತಿಯ ಶಿಕ್ಷಕರು 101 ಮಕ್ಕಳೊಂದಿಗೆ ಕಾರ್ಯ ನಿರ್ವಹಿಸಿದರು. ಈ ಅಧ್ಯಯನದ ಫಲಿತಾಂಶವು, ಪದ ಗ್ರಹಿಕೆ ಮತ್ತು ಅಭಿವ್ಯಕ್ತಿಯಲ್ಲಿ ಲಾಭ ಉಂಟಾಗಿರುವುದನ್ನು ತೋರಿಸಿದವು. ಹೀಗೆ, ಪದ ಭಂಡಾರದ ಅಭಿವೃದ್ಧಿಗಾಗಿ ನಡೆಸುವ ಆಟ-ಆಧಾರಿತ ಚಟುವಟಿಕೆಯಲ್ಲಿ ವಯಸ್ಕರ ಬೆಂಬಲ ದೊರೆತರೆ ಪ್ರಯೋಜನವಾಗುತ್ತದೆ ಎಂಬುದನ್ನು ಎರಡೂ ಅಧ್ಯಯನಗಳು ಸ್ಪಷ್ಟವಾಗಿ ತೋರಿಸಿಕೊಟ್ಟವು. ಭಾರತೀಯ ಸನ್ನಿವೇಶದಲ್ಲಿ, ಮಕ್ಕಳ ದ್ವಿಭಾಷಾ ಮತ್ತು ಬಹುಭಾಷಾ ಸನ್ನಿವೇಶಗಳನ್ನು ಬಳಸಲು ಉತ್ತೇಜಿಸುವ ಆಟಗಳು, ತರಗತಿ ಕೋಣೆಯೊಳಗಿನ ಪ್ರಕ್ರಿಯೆಗಳಲ್ಲಿ ಇನ್ನಷ್ಟು ಸಕ್ರಿಯ ಭಾಗವಹಿಸಲು ಪ್ರೋತ್ಸಾಹಿಸುತ್ತವೆ.

ಸಂಖ್ಯೆ ಮತ್ತು ಸ್ಥಳೀಕ ಕೌಶಲ್ಯಗಳು

ಮಕ್ಕಳ ಅನೇಕ ಆಟಗಳು ಸಂಖ್ಯೆಗಳು, ಕೂಡುವುದು, ಕಳೆಯುವುದು ಇತ್ಯಾದಿಗಳನ್ನು ಒಳಗೊಂಡಿವೆ. ಬೀದಿಯ ಮೂಲೆಗಳಲ್ಲಿ ಮತ್ತು ಆಟದ ಮೈದಾನಗಳಲ್ಲಿ ಮಕ್ಕಳು ದೈಹಿಕ ಆಟಗಳಲ್ಲಿ ತೊಡಗಿರುವುದನ್ನು ಮತ್ತು ಸಂಖ್ಯೆಗಳನ್ನು ವಿವಿಧ ರೀತಿಯಲ್ಲಿ ಕುಶಲತೆಯಿಂದ ಬಳಸುತ್ತಿರುವುದನ್ನು ನಾವು ಕಾಣಬಹುದು. ಆದರೂ ಚಿಕ್ಕ ಮಕ್ಕಳು ಆಗಲೇ ಗಣಿತದ ಕುರಿತು ಭೀತಿಗೆ ಒಳಗಾಗಿರುವುದನ್ನು ನಾವು ಸಾಮಾನ್ಯವಾಗಿ ನೋಡ-ಬಹುದು. ಹೀಗಾಗಿ ಚಿಕ್ಕ ಮಕ್ಕಳು ಗಣಿತದ ಪರಿಕಲ್ಪನೆಗಳನ್ನು ಹೇಗೆ ಕಲ್ಪಿಸಿಕೊಳ್ಳುತ್ತಾರೆ ಎಂಬುದನ್ನು ಅರಿತುಕೊಳ್ಳಲು ಹಾಗೂ ಗ್ರಹಿಸುತ್ತಾರೆ ಅವರನ್ನು ರೀತಿಯಲ್ಲಿ ಇದನ್ನು ಪರಿಚಯಿಸಲು ಆರಂಭಿಕ ತರಗತಿಗಳು ಸೂಕ್ತ.

ಅಧ್ಯಯನವೊಂದರಲ್ಲಿ, ಸಿಯೊ ಮತ್ತು ಗಿನ್ಸ್‌ಬರ್ಗ್ (2003), ಮುಕ್ತ ಆಟದ ಸಮಯದಲ್ಲಿ ಎಳೆಯ ಮಕ್ಕಳು ಗಣಿತದ ಪರಿಕಲ್ಪನೆಗಳನ್ನು ಸ್ವಾಭಾವಿಕವಾಗಿ ಹೇಗೆ ಅನ್ವೇಷಿಸುತ್ತಾರೆ ಎಂಬುದನ್ನು ಕಂಡುಕೊಳ್ಳಲು ಯತ್ನಿಸಿದರು. ಈ ಅಧ್ಯಯನವನ್ನು ವಿವಿಧ ಶಾಲೆಗಳ, ಕಡಿಮೆ ಆದಾಯದ ಒಟ್ಟು 90ರಷ್ಟು ಆಫ್ರಿಕನ್ ಅಮೆರಿಕನ್, ಲ್ಯಾಟಿನೊ ಮತ್ತು ಬಿಳಿಯ 4–5 ವರ್ಷ ವಯಸ್ಸಿನ ಮಕ್ಕಳೊಂದಿಗೆ ನಡುವೆ ನಡೆಸಲಾಯಿತು. ಮಕ್ಕಳನ್ನು ನಿರ್ದಿಷ್ಟ ಸಮಯದ ಕಾಲ ಗಮನಿಸಿದ ನಂತರ, ಮಕ್ಕಳು ವರ್ಗೀಕರಣ, ಪರಿಮಾಣ, ಎಣಿಕೆ, ಚಲನವಿಜ್ಞಾನ, ವಿನ್ಯಾಸ ಮತ್ತು ಆಕಾರ ಮತ್ತು ಸ್ಥಳೀಕ ಸಂಬಂಧ ಸೇರಿದಂತೆ ವಿವಿಧ ರೀತಿಯ ಚಟುವಟಿಕೆಗಳ

ಮಕ್ಕಳು ತೊಡಗಿದ್ದನ್ನು ಸಂಶೋಧಕರು ಗಮನಿಸಿದ್ದಾರೆ. ಫಿಶರ್ ಮತ್ತಿತರರು (2013) ಪೂರ್ವ ಪ್ರಾಥಮಿಕ ಶಾಲಾ ಮಕ್ಕಳ ಕುರಿತು ನಡೆಸಿದ ಅಧ್ಯಯನವು, ಚಿಕ್ಕ ಮಕ್ಕಳು ಜ್ಯಾಮಿತಿ ಮತ್ತು ಆಕಾರಗಳನ್ನು ಕಲಿಯುವ ಕುರಿತು ಗಮನಿಸಿದೆ. ಈ ಅಧ್ಯಯನವನ್ನು ನಿರ್ದೇಶಿತ ಆಟ, ಮುಕ್ತ ಆಟ ಮತ್ತು ನೀತಿಬೋಧಕ ಪಾಠಗಳು ಮುಂತಾದ ಸನ್ನಿವೇಶವನ್ನು ಒಳಗೊಂಡಂತೆ 4–5 ವರ್ಷದ ಪ್ರಾಯದ 70 ಮಕ್ಕಳ ಮೇಲೆ ನಡೆಸಲಾಯಿತು. ನಿರ್ದೇಶಿತ ಆಟದ ವಿಚಾರದಲ್ಲಿ ವಯಸ್ಕರೊಬ್ಬರು ಮಗುವಿನ ಜೊತೆ ಸಂವಾದವನ್ನು ಬೆಂಬಲಿಸಿದರು. ಮುಕ್ತ ಆಟದಲ್ಲಿ ತಮಗೆ ಬೇಕಾದಂತೆ ಆಕಾರಗಳ ಕುರಿತು ಚರ್ಚೆ ಮಾಡಲು ಮಕ್ಕಳಿಗೆ ಮುಕ್ತ ಅವಕಾಶ ನೀಡಲಾಯಿತು. ನೇರ ಪಾಠದಲ್ಲಿ, ಶಿಕ್ಷಕರು ಪಾಠವನ್ನು ಮಾಡಿದರು ಮತ್ತು ಮಕ್ಕಳು ಕುಳಿತುಕೊಂಡು ಅವರ ಪಾಠವನ್ನು ಕೇಳಿದರು. ಇತರ ಎರಡು ಸನ್ನಿವೇಶಗಳಿಗೆ ಹೋಲಿಸಿದರೆ ನಿರ್ದೇಶಿತ ಆಟದ ಸನ್ನಿವೇಶದಲ್ಲಿ ಮಕ್ಕಳ ಕಲಿಕೆಯು ಗರಿಷ್ಠವಾಗಿತ್ತು ಎಂಬುದನ್ನು ಈ ಅಧ್ಯಯನದ ಫಲಿತಾಂಶಗಳು ತೋರಿಸಿಕೊಟ್ಟಿವೆ.

ಇನ್ನೊಂದು ಅಧ್ಯಯನದಲ್ಲಿ, ರಮಣಿ ಮತ್ತು ಸೀಗ್ಲರ್ (2008), ನಿರ್ದೇಶಿತ ಆಟದ ರೂಪದಲ್ಲಿ ಬೋರ್ಡ್ ಆಟಗಳನ್ನು ಆಡುವುದರಿಂದ ವಿವಿಧ ಸಂಖ್ಯಾ ಕಾರ್ಯಗಳ ಜ್ಞಾನವು ವೃದ್ಧಿಸುತ್ತದೆ ಎಂಬುದನ್ನು ತಿಳಿಯಲು ಯತ್ನಿಸಿದರು. ಕಡಿಮೆ ಆದಾಯದ ಹಿನ್ನೆಲೆಯ 124 ಪೂರ್ವ ಪ್ರಾಥಮಿಕ ಶಾಲಾ ಮಕ್ಕಳನ್ನು ಈ ಉದ್ದೇಶಕ್ಕಾಗಿ ಒಳಗೊಳ್ಳಲಾಯಿತು. ಈ ಕಾರ್ಯಗಳು ಸಂಖ್ಯಾ ಪರಿಮಾಣ, ಸಂಖ್ಯಾ ರೇಖೆಯ ಅಂದಾಜು, ಸಂಖ್ಯೆಯನ್ನು ಗುರುತಿಸುವುದು ಮತ್ತು ಎಣಿಕೆಯನ್ನು ಒಳಗೊಂಡಿದ್ದವು. ಶಾಲಾಪೂರ್ವ ಮಕ್ಕಳು ಸಂಶೋಧಕರೊಂದಿಗೆ ತಲಾ 15–20 ನಿಮಿಷಗಳಿಗೆ ನಾಲ್ಕು ಅವಧಿಗಳಲ್ಲಿ (ಮೊದಲಿಗೆ ಎರಡು ವಾರ ಮತ್ತು ಒಂಬತ್ತು ವಾರಗಳ ನಂತರ ಇನ್ನೊಂದು ಅವಧಿ) ಬೋರ್ಡ್ ಆಟಗಳಲ್ಲಿ ತೊಡಗಿಸಿಕೊಂಡಿದ್ದರು. ಅಧ್ಯಯನದ ಒಂಬತ್ತು ವಾರಗಳ ನಂತರವೂ ಗಳಿಕೆಗಳು ಸ್ಥಿರವಾಗಿದ್ದವು ಎಂದು ಸಂಶೋಧಕರು ಕಂಡುಕೊಂಡರು. ಹೀಗೆ, ತರಗತಿ ಕೋಣೆಗಳಲ್ಲಿ ಸಾಮಾನ್ಯವಾಗಿರುವ ಅದೇ ಕಾಗದ – ಪೆನ್ಸಿಲ್ ಕಾರ್ಯಗಳ ಬದಲಿಗೆ ಈ ಚಿಕ್ಕ ಮಕ್ಕಳಲ್ಲಿ ಆಟ ಆಧಾರಿತ ರೀತಿಯಲ್ಲಿ ಗಣಿತದ ಪರಿಕಲ್ಪನೆಗಳನ್ನು ಬಳಸಬಹುದು ಎನ್ನುವುದಕ್ಕೆ ಸಾಕಷ್ಟು ಸಾಕ್ಷ್ಯಾಧಾರಗಳು ದೊರೆತಿವೆ.

ಉಪಸಂಹಾರ

ಬದಲಾಗುತ್ತಿರುವ ಪರಿಸ್ಥಿತಿಗೆ ಅನುಗುಣವಾಗಿ, ಎಲ್ಲ ಒಂದೇ ಸಿದ್ಧರಿಗೂ ಸೂತ್ರವನ್ನು ಬಳಸುವ ಬದಲಿಗೆ, ಮಕ್ಕಳನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುವ ಪಠ್ಯಕ್ರಮ ಬೋಧನೆಯನ್ನು ತರಗತಿ ಕೋಣೆಯಲ್ಲಿ ಅಳವಡಿಸಬೇಕಾದ ಅಗತ್ಯತೆ ಇದೆ. ನಮ್ಮ ಹೆಚ್ಚಿನ ತರಗತಿ ಕೋಣೆಗಳು ಅತ್ಯಂತ ಚಿಕ್ಕ ಮಕ್ಕಳಿಗೂ ಉರು ಹೊಡೆದು ಕಲಿಯುವುದನ್ನು ಮತ್ತು ನೆನಪಿಟ್ಟುಕೊಳ್ಳುವುದನ್ನೇ ಕಲಿಸುತ್ತಿವೆ. ಇದು ಬೋಧನೆಯ ವಿಷಯವನ್ನು ಅರ್ಥ ಮಾಡಿಕೊಳ್ಳಲು ಮಕ್ಕಳಿಗೆ ಅನುವು ಮಾಡಿ ಕೊಡುವುದಿಲ್ಲ. ಈ ವಿಧಾನಗಳು ಎಷ್ಟು ಆಳವಾಗಿ ಬೇರೂರಿವೆ ಎಂದರೆ ಮಕ್ಕಳು ಕಾರ್ಯಹಾಳೆಗಳನ್ನು ತುಂಬಿಸುವುದೇ ಗುಣಮಟ್ಟದ ಶಿಕ್ಷಣವಾಗಿದೆ ಎಂದು ಸಮುದಾಯದ ಸಹಭಾಗಿಗಳು ಪರಿಗಣಿಸುತ್ತಾರೆ.

ಆರಂಭಿಕ ವರ್ಷಗಳಲ್ಲಿ ಮಕ್ಕಳು ತಮ್ಮ ಸನ್ನಿವೇಶಗಳನ್ನು ಅರಿತುಕೊಳ್ಳುವ ಮತ್ತು ತಮ್ಮದೇ ಆದ ವಿಶಿಷ್ಟ ಮತ್ತು ಸೃಜನಶೀಲ ರೀತಿಯಲ್ಲಿ ಇವುಗಳಿಗೆ ಪ್ರತಿಕ್ರಿಯಿಸುತ್ತಾರೆ ಎಂಬುದು ನಮಗೆ ತಿಳಿದಿದೆ. ಆಟ–ಆಧಾರಿತ ಕಾರ್ಯವಿಧಾನಗಳ ಬಳಕೆಯು ಮಕ್ಕಳಿಗೆ ತಮ್ಮ ಸೃಜನಶೀಲತೆ ಮತ್ತು ವಿಮರ್ಶಾತ್ಮಕ ಯೋಚನಾ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ (ಎನ್‌ಇಪಿ, 2020). ಅಲ್ಲದೆ, ವಿವಿಧ ಸನ್ನಿವೇಶಗಳಲ್ಲಿ ಸಂಶೋಧನೆಗಳ ಫಲಿತಾಂಶಗಳು ತರಗತಿಯ ಚಟುವಟಿಕೆಗಳಲ್ಲಿ ಆಟವನ್ನು ಬಳಸುವುದನ್ನು ಬೆಂಬಲಿಸಿವೆ. ಮುಕ್ತ ಆಟ ಮತ್ತು ನಿರ್ದೇಶಿತ ಆಟವನ್ನು ಬಳಸುವುದಕ್ಕೆ ಪೂರಕವಾದ ಆಧಾರಗಳು ದೊರೆತಿವೆ. ಆಟದ ಪ್ರಕಾರಗಳು ಮತ್ತು ಅವುಗಳಿಂದ ದೊರೆಯುವ ಲಾಭಗಳನ್ನು ಪರಿಶೀಲಿಸುವ ಅಗತ್ಯವಿದೆ. ಮಕ್ಕಳ ಕಲಿಕೆ ಮತ್ತು ಬೆಳವಣಿಗೆಯನ್ನು ಆಟದ ಮೂಲಕ ಸಕ್ರಿಯಗೊಳಿಸಲು ನಾವು ಇಚ್ಛಿಸಿದರೆ ಬೆಂಬಲವಿಲ್ಲದ ಮತ್ತು ಬೆಂಬಲದೊಂದಿಗೆ ಮಗುವಿನ ಕಾರ್ಯ ಸಾಮರ್ಥ್ಯ ಎನ್ನುವ Zone of Proximal Development ವೈಗೋಸ್ಕಿಯನ್ ದೃಷ್ಟಿಕೋನವನ್ನು ಇಟ್ಟುಕೊಂಡು ಆಟವು ಸನ್ನಿವೇಶ ಮತ್ತು ತರಗತಿ ಕೋಣೆಗೆ ತಕ್ಕುದಾಗಿ ವಿಕಸನಗೊಳ್ಳುವ ಅಗತ್ಯವಿದೆ. ಆಟ ಆಧಾರಿತ ವಿಧಾನಗಳನ್ನು ತರಗತಿ ಕೋಣೆಗಳಿಗೆ ತರುವ ಸಲುವಾಗಿ ಆಟ–ಆಧಾರಿತ ಕಲಿಕೆಯ ಕುರಿತು ಚಾಲ್ತಿಯಲ್ಲಿರುವ ಸಂಶೋಧನೆಯನ್ನು ಅರಿತುಕೊಳ್ಳುವುದು ಅವಶ್ಯಕ. ಅಲ್ಲದೆ ಈ ವಿಧಾನಗಳನ್ನು ಬಳಸಿ ಶಿಕ್ಷಕರು ವಿಚಾರ ವಿನಿಮಯ ಮಾಡಬಹುದಾದ ಸೇವಾನಿರತ ಕಲಿಕೆಗೆ ಅವಕಾಶಗಳನ್ನು ರೂಪಿಸಬೇಕು. ಜೊತೆಗೆ ಪೋಷಕರು ಮತ್ತು ಸಮುದಾಯಗಳು ಹೊಂದಿರುವ ಸಮೃದ್ಧ ಜ್ಞಾನದ ಬಗೆಗೆ ಪರಿಚಿತರಾಗಬೇಕು ಹಾಗೂ ನೀತಿ–ನಿಯಮ ಮತ್ತು ಪಠ್ಯಕ್ರಮದ ಮಟ್ಟದಲ್ಲಿ ಇದನ್ನು ಪ್ರತಿಪಾದಿಸಬೇಕು.

ಪರಾಮರ್ಶನ

Barnett, L. A. (1990). Developmental benefits of play for children. *Journal of Leisure* Research, 22(2), 138-153.

Bergen, D. (2002). The role of pretend play in children's cognitive development. *Early Childhood Research & Practice*, 4(1).

Bergen, D., & Mauer, D. (2000). Symbolic play, phonological awareness, and literacy skills at three age levels. In K. A. Roskos & J. F. Christie (Eds.), *Play and literacy in early childhood: Research from multiple perspectives* (pp. 45–62). Lawrence Erlbaum Associates Publishers.

Christie, J. F., & Enz, B. (1992). The effects of literacy play interventions on preschoolers' play patterns and literacy development. *Early Education and Development*, 3(3), 205-220.

Fisher, K. R., Hirsh-Pasek, K., Newcombe, N., & Golinkoff, R. M. (2013). Taking shape: Supporting preschoolers' acquisition of geometric knowledge through guided play. *Child Development*, 84(6), 1872-1878.

Ghafouri, F., & Wien, C. A. (2005). “Give us a privacy”: Play and social literacy in young children. *Journal of Research in Childhood Education*, 19(4), 279-291.

Government of India, Ministry of Women and Child Development (MWCD). (2013). *The National Early Childhood Care and Education Curriculum Framework*. New Delhi.

Government of India, Ministry of Human Resource Development. (2020). *National Education Policy*. New Delhi.

Kaul, V., & Sharma, S. (2017). Early childhood policies in India: a historical analysis. The SAGE Handbook of Early Childhood Policy, 32-48.

Kumar, K. (1988). Origins of India's" textbook culture". *Comparative Education Review*, 32(4), 452-464.

Kwon, J.Y., Yawkey, T.D. Principles of emotional development and children's pretend play. IJEC 32, 9 (2000). https://doi.org/10.1007/BF03169017

NCERT (2005) National Curriculum Framework 2005, New Delhi: National Council for Education Research and Training.

Pellegrini, A. D. (2006). *Recess: Its role in education and development*. Psychology Press.

Ramani, G. B., & Siegler, R. S. (2008). Promoting broad and stable improvements in low-income children's numerical knowledge through playing number board games. *Child development*, 79(2), 375-394.

Rubin, K. H. (2001). The play observation scale (POS). *Unpublished manuscript, University of Maryland*.

Scott, E., & Panksepp, J. (2003). Rough-and-tumble play in human children. *Aggressive Behavior: Official Journal of the International Society for Research on Aggression*, 29(6), 539-551.

Seo, K. H., & Ginsburg, H. P. (2004). What is developmentally appropriate in early childhood mathematics education? Lessons from new research. *Engaging young children in mathematics: Standards for early childhood mathematics education*, 91-104.

Singh, S. & Chaudhary, A.B. (2019). Situating teacher beliefs. In Venita Kaul and Suman Bhattarjea (Eds.) Early Childhood Education and School Readiness in India. Singapore: Springer. pp. 173-194.

Toub, T. S., Hassinger-Das, B., Nesbitt, K. T., Ilgaz, H., Weisberg, D. S., Hirsh-Pasek, K., ... & Dickinson, D. K. (2018). The language of play: Developing preschool vocabulary through play following shared book-reading. *Early Childhood Research Quarterly*, 45, 1-17.

Unicef. (2018). Learning Through Play: Strengthening Learning Through Play in Early Childhood Education Programmes. https://www.unicef.org/sites/default/files/2018-12/UNICEF-Lego-Foundation-Learning-through-Play.pdf

Weisberg, D. S., Hirsh-Pasek, K., Golinkoff, R. M., Kittredge, A. K., & Klahr, D. (2016). Guided play: Principles and practices. *Current Directions in Psychological Science*, 25(3), 177-182.



ಡಾ ಸುನಿತಾ ಸಿಂಗ್ ಅವರು ದೆಹಲಿಯ ಅಂಬೇಡ್ಕರ್ ವಿಶ್ವವಿದ್ಯಾಲಯದ (ಎಯುಡಿ) ಸ್ಕೂಲ್ ಆಫ್ ಎಜುಕೇಶನ್ ಸ್ಟಡೀಸ್‌ನ (ಎಸ್‌ಇಎಸ್) ಅಸೋಸಿಯೇಟ್ ಪ್ರೊಫೆಸರ್ ಆಗಿದ್ದಾರೆ. ಅವರು ತಮ್ಮ ಪಿಹೆಚ್‌ಡಿ ಪದವಿಯನ್ನು ಅಮೆರಿಕದ ಇಲಿನಾಯಿ ವಿಶ್ವವಿದ್ಯಾಲಯದ, ಡಿಪಾರ್ಟ್‌ಮೆಂಟ್ ಆಫ್ ಕರಿಕ್ಯುಲಮ್ ಅಂಡ್ ಇನ್ಸ್‌ಟ್ರಕ್ಷನ್ (ಲ್ಯಾಂಗ್ವೇಜ್ ಅಂಡ್ ಲಿಟರಸಿ)ನಿಂದ ಪಡೆದಿದ್ದಾರೆ. ಎಯುಡಿ ಗೆ ಸೇರುವ ಮೊದಲು ಅವರು ನ್ಯೂಯಾರ್ಕ್‌ನ ಸಿರೆಕ್ಯೂಸ್‌ನಲ್ಲಿರುವ ಲೆ ಮೋಯ್ನೆ ಕಾಲೇಜಿನಲ್ಲಿ ಅಸೋಸಿಯೇಟ್ ಪ್ರೊಫೆಸರ್ ಆಗಿದ್ದರು. ಅವರು ಎಯುಡಿ ಯ ಸೆಂಟರ್ ಫಾರ್ ಅರ್ಲಿ ಚೈಲ್ಡ್‌ಹುಡ್ ಎಜುಕೇಶನ್ ಅಂಡ್ ಡೆವೆಲಪ್‌ಮೆಂಟ್ (ಸಿಇಸಿಇಡಿ) ನಲ್ಲಿ ಕೆಲಸ ಮಾಡಿದ್ದು, ಆರಂಭಿಕ ಬಾಲ್ಯಾವಸ್ಥೆ ಆರೈಕೆ, ಶಿಕ್ಷಣ, ಭಾಷೆ ಮತ್ತು ಸಾಕ್ಷರತೆಯಲ್ಲಿ ಸಂಶೋಧನೆ, ಮೌಲ್ಯಮಾಪನ, ಸಾಮರ್ಥ್ಯಾಭಿವೃದ್ಧಿ ರೂಪಿಸುವುದು ಮತ್ತು ಪ್ರತಿಪಾದನೆ ಕುರಿತಂತೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳು ಪ್ರಾಯೋಜಿಸುವ ಯೋಜನೆಗಳಿಗೆ ಮಾರ್ಗದರ್ಶನ ನೀಡಿದ್ದಾರೆ. ತಮ್ಮ ಸಂಶೋಧನೆಯಲ್ಲಿ ಅವರು ಶಾಲೆಗಳಲ್ಲಿ ಶಿಕ್ಷಕರು, ಕುಟುಂಬಗಳು ಮತ್ತು ಸಮುದಾಯಗಳಲ್ಲಿ ದೊಡ್ಡಪ್ರಮಾಣದಲ್ಲಿ ಕೆಲಸ ಮಾಡಿದ್ದಾರೆ. ಇವರನ್ನು sunitasingh@aud.ac.in ಮೂಲಕ ಸಂಪರ್ಕಿಸಬಹುದು.

ಅನುವಾದ: **ಮೆಲ್ವಿನ್ ಮೆಂಡೊನ್ಸಾ** । ಪರಿಶೀಲನೆ: **ಲತಾ ಕೆ.ಸಿ.**